**ಹಿರಿಯ ಶ್ರೇಣಿ ದಿವಾಣಿ ನ್ಯಾಯಾಲಯ ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ, ಹೊನ್ನಾವರ**

**ಸಿ.ಸಿ. ನಂ. 72/2025**

ಫಿರ್ಯಾದಿಃ ಸರಕಾರದ ಪರವಾಗಿ
ಪೊಲೀಸ್ ಉಪ ನಿರೀಕ್ಷಕರು,
ಹೊನ್ನಾವರ ಪೊಲೀಸ್ ಠಾಣೆ.

**-ವಿರುದ್ಧ-**

ಆರೋಪಿಃ ಆದಿತ್ಯ ನಾಗಪ್ಪ ಗೌಡ,
ವಯಸ್ಸುಃ ಅಂದಾಜು 24 ವರ್ಷ,
ಉದ್ಯೋಗಃ ವ್ಯಾಪಾರ,
ಸಾಕೀನಃ ಬರ್ನಕೇರಿ, ದಿಬ್ಬಣಗಲ್,
ತಾಲೂಕುಃ ಹೊನ್ನಾವರ.

**ದೋಷಾರೋಪಣೆ**

ಶ್ರೀ ಬಿ.ಸಿ. ಚಂದ್ರಶೇಖರ್, ಹಿರಿಯ ಶ್ರೇಣಿ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾಯಿಕ ದಂಡಾಧಿಕಾರಿಯಾದ ನಾನು ಆರೋಪಿತನ ಮೇಲೆ ಈ ಕೆಳಕಂಡ ದೋಷಾರೋಪಣೆಗಳನ್ನು ಹೊರಿಸುತ್ತಿದ್ದೇನೆ.

ದಿನಾಂಕಃ 23-07-2025 ರಂದು ಸಾಯಂಕಾಲ 6.10 ಗಂಟೆ ಸುಮಾರಿಗೆ ಆರೋಪಿಯು ಹೊನ್ನಾವರ ಪೋಲೀಸ್ ಠಾಣಾ ವ್ಯಾಪ್ತಿಯಲ್ಲಿರುವ ಹೊನ್ನಾವರ ತಾಲೂಕಿನ ದಿಬ್ಬಣಗಲ್ ದ ರಾಷ್ಟ್ರೀಯ ಹೆದ್ದಾರಿ 69 ರ ಪಕ್ಕದಲ್ಲಿರುವ ಅಂಗಡಿ ಸಾಲುಗಳ ಪಕ್ಕದಲ್ಲಿರುವ ಸಾರ್ವಜನಿಕ ಸ್ಥಳದಲ್ಲಿ ಯಾವುದೇ ಪರವಾನಿಗೆ ಇಲ್ಲದೇ ಅಕ್ರಮವಾಗಿ ಸಾರಾಯಿಯನ್ನು ಮಾರಾಟ ಮಾಡಿ ಲಾಭಗಳಿಸುವ ಉದ್ದೇಶದಿಂದ ಸಾರಾಯಿಯನ್ನು ತನ್ನ ಬಳಿ ದಾಸ್ತಾನು ಇಟ್ಟುಕೊಂಡಿದ್ದು, ಚಾ.ಸಾ. 1 ರವರು ದಾಳಿ ಮಾಡಿದಾಗ ಆರೋಪಿಯು ಓಡಿ ಪರಾರಿ ಆಗಿದ್ದು, ಸದ್ರಿ ಜಾಗದಲ್ಲಿ ಆರೋಪಿತನು ತನ್ನ ಬಳಿ ಖಾಕಿ ಬಣ್ಣದ ರಟ್ಟಿನ ಬಾಕ್ಸನಲ್ಲಿ 650 ಎಮ್ ಎಲ್ ನ 07 ಬುಲೆಟ್ ಸೂಪರ್ ಸ್ಟ್ರಾಂಗ್ ಬಿಯರ್ ಗಾಜಿನ ಬಾಟಲಿಗಳು, ಬಿಳಿ ಬಣ್ಣದ ಪ್ಲಾಸ್ಟಿಕ್ ಚೀಲದಲ್ಲಿರುವ ಖಾಕಿ ಬಣ್ಣದ ರಟ್ಟಿನ ಬಾಕ್ಸನಲ್ಲಿ 650 ಎಮ್ ಎಲ್ ನ 09 ಯು.ಬಿ. ಎಕ್ಸಪೋರ್ಟ ಸ್ಟ್ರಾಂಗ್ ಪ್ರಿಮಿಯಮ್ ಬೀಯರ್ ಗಾಜಿನ ಬಾಟಲಿಗಳು, ಬಿಳಿ ಮತ್ತು ಕೆಂಪು ಬಣ್ಣದ ಬಟ್ಟೆ ಚೀಲದಲ್ಲಿ 180 ಎಮ್ ಎಲ್ ನ 12 ಓಲ್ಡ ಟವರ್ನ ವಿಸ್ಕಿ ಟೆಟ್ರಾಪ್ಯಾಕ್ ಗಳು, 180 ಎಮ್ ಎಲ್ ನ ಓಲ್ಡ ಮೊಂಕ್ ರಮ್ ನ 13 ಟೆಟ್ರಾ ಪ್ಯಾಕ್ ಗಳು, 180 ಎಮ್ ಎಲ್ ನ ಬ್ಯಾಗ್ ಪೈಪರ್ ವಿಸ್ಕಿ 09 ಟೆಟ್ರಾಪ್ಯಾಕ್ ಗಳು ಇದ್ದು, ಅವುಗಳನ್ನು ವಶಪಡಿಸಿಕೊಂಡಿದ್ದು, ಈ ಮೂಲಕ ಆರೋಪಿಯು ಕರ್ನಾಟಕ ಅಬಕಾರಿ ಕಾಯ್ದೆ ಕಲಂ 32 ಮತ್ತು 34 ರಡಿಯಲ್ಲಿ ಅಪರಾಧ ಎಸಗಿರುತ್ತೀರಿ ಎನ್ನುವ ದೋಷಾರೋಪಣೆಗಳನ್ನ ಹೊರಿಸುತ್ತಿದ್ದೇನೆ.

ಮೇಲಿನ ಆಪಾದನೆಗಳಿಗೆ ಈ ನ್ಯಾಯಾಲಯದಲ್ಲಿ ವಿಚಾರಣೆಗೆ ಗುರಿಯಾಗಬೇಕೆಂದು ನಿರ್ದೇಶಿಸುತ್ತಿದ್ದೇನೆ.

Sd/-

ದಿನಾಂಕಃ 07-02-2026.
ಸ್ಥಳಃಹೊನ್ನಾವರ.

**(ಶ್ರೀ ಬಿ.ಸಿ. ಚಂದ್ರಶೇಖರ್)**
**ಹಿರಿಯ ಶ್ರೇಣಿ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ.ದಂಡಾಧಿಕಾರಿಗಳು, ಹೊನ್ನಾವರ.**

**<u>ಹಿರಿಯ ಶ್ರೇಣಿ ದಿವಾಣಿ ನ್ಯಾಯಾಲಯ ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ, ಹೊನ್ನಾವರ</u>**

**<u>ಸಿ.ಸಿ. ನಂ. 72/2025</u>**

| | |
|---|---|
| ಫಿರ್ಯಾದಿಃ | ಸರಕಾರದ ಪರವಾಗಿ<br>ಪೊಲೀಸ್ ಉಪ ನಿರೀಕ್ಷಕರು,<br>ಹೊನ್ನಾವರ ಪೊಲೀಸ್ ಠಾಣೆ. |
| | **-ವಿರುಧ್ಧ-** |
| ಆರೋಪಿಃ | ಆದಿತ್ಯ ನಾಗಪ್ಪ ಗೌಡ,<br>ವಯಸ್ಸುಃ ಅಂದಾಜು 24 ವರ್ಷ,<br>ಉದ್ಯೋಗಃ ವ್ಯಾಪಾರ,<br>ಸಾಕೀನಃ ಬರ್ನಕೇರಿ, ದಿಬ್ಬಣಗಲ್,<br>ತಾಲೂಕುಃ ಹೊನ್ನಾವರ. |

**<u>ಆಪಾದನೆ</u>**

ಪ್ರಶ್ನೆಃ ಈಗ ಓದಿ ಹೇಳಿದ ದೋಷರೋಪಣೆಗಳನ್ನು ನಿಮಗೆ ತಿಳಿಯಿತೇ?

ಉತ್ತರಃ

ಪ್ರಶ್ನೆಃ ಸದರಿ ದೋಷರೋಪಣೆಗಳನ್ನು ನೀವು ಒಪ್ಪಿಕೊಳ್ಳುತ್ತಿರೋ ಅಥವಾ ವಿಚಾರಣೆ ಆಗಬೇಕೊ?

ಉತ್ತರಃ

(ಸದರಿ ದೋಷಾರೋಪಣೆಗಳನ್ನು ಆರೋಪಿಗೆ ಗೊತ್ತಿರುವ ಕನ್ನಡ ಭಾಷೆಯಲ್ಲಿ ಓದಿ ವಿವರಿಸಿ ಹೇಳಲಾಯಿತು. ಪ್ರಶ್ನೆಗಳನ್ನ ಸಹ ಆರೋಪಿಗೆ ಗೊತ್ತಿರುವ ಕನ್ನಡ ಭಾಷೆಯಲ್ಲಿ ಓದಿ ವಿವರಿಸಿ ಹೇಳಿ ಅವರು ನೀಡಿದ ಉತ್ತರಗಳನ್ನ ನನ್ನ ಸ್ವಹಸ್ತಾಕ್ಷರಗಳಿಂದ ಬರೆದುಕೊಳ್ಳಲಾಗಿರುತ್ತದೆ)

Sd/-

ದಿನಾಂಕಃ 07-02-2026.

ಸ್ಥಳಃಹೊನ್ನಾವರ.

**(ಶ್ರೀ ಬಿ.ಸಿ. ಚಂದ್ರಶೇಖರ್)**
**ಹಿರಿಯ ಶ್ರೇಣಿ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾಯದಂಡಾಧಿಕಾರಿಗಳು, ಹೊನ್ನಾವರ.**